**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ನ್ಯಾದಂಡರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.91/2026**

| | | |
|---|---|---|
| **ಫಿರ್ಯಾದಿ** | : | ರಾಜ್ಯ ಸರ್ಕಾರ,<br>ಗೋಣಿಕೊಪ್ಪ ಪೋಲೀಸ್ ಠಾಣೆ. |
| | | **ವಿರುದ್ಧ** |
| **ಆರೋಪಿ** | : | ಶ್ರೀ. ಮನೋಜ್ ಬಿ.ಜಿ,<br>ತಂದೆ: ಬಿ.ಟಿ.ಗಣಪತಿ,<br>ಪ್ರಾಯ 29 ವರ್ಷ<br>ವಾಸ: ಹಳ್ಳಿಗಟ್ಟು ಗ್ರಾಮ,<br>ಪೊನ್ನಂಪೇಟೆ ತಾಲ್ಲೂಕು, ಕೊಡಗು. |

**ಆರೋಪಣೆ**

ಶ್ರೀ ಶ್ರೀನಾಥ್ ಎ.. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:

ದಿನಾಂಕ 20.11.2025 ರಂದು ಸಮಯ ಬೆಳಗಿನ ಜಾವ 00.30 ಗಂಟೆಗೆ ಗೋಣಿಕೊಪ್ಪ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಜೋಡುಬೀಟಿ ಗ್ರಾಮದ ಬಾರ್ಬಿಕ್ಯೂ ಹೋಟೆಲ್ ಮುಂಭಾಗದ ಗೋಣಿಕೊಪ್ಪ - ಪೊನ್ನಂಪೇಟೆ ರಾಜ್ಯ ಹೆದ್ದಾರಿ 89 ರಲ್ಲಿ ಸಾಕ್ಷಿ 2 ಎರವರ ಬೆಳ್ಳಿ ರವರು ರಸ್ತೆ ದಾಟುತ್ತಿರುವಾಗ, ಆರೋಪಿಯಾದ ನೀವು ಗೋಣಿಕೊಪ್ಪ ಕಡೆಯಿಂದ ತಮ್ಮ ಭಾಪ್ತು ಕೆಎ.01.ಎಂಜೆ.0012 ರ ಮಾರುತಿ 800 ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ದಾಡುತ್ತಿದ್ದ ಸಾಕ್ಷಿ 2 ರವರಿಗೆ ಅಪಘಾತ ಪಡಿಸಿರುತ್ತೀರಿ ಎಂಬುದಾಗಿರುತ್ತದೆ, ಆ ಕಾರಣ ಬಿ.ಎನ್.ಎಸ್ ಕಲಂ 281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಸದರಿ ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ 2 ರವರು ಕಾರಿನ ಮೇಲೆ ಹಾಡಿ ಬಿದ್ದು, ನಂತರ ರಸ್ತೆಗೆ ಬಿದ್ದು, ಅವರ ಮೂಗು, ಹಣೆ, ಎಡ ಕೆನ್ನೆಗೆ ತರಚಿದ ಗಾಯವಾಗಿ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಆ ಕಾರಣ ಬಿ.ಎನ್.ಎಸ್ ಕಲಂ 125(ಎ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಸದರಿ ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ 2 ರವರ ಎರಡು ಕಾಲುಗಳಿಗೆ ರಕ್ತಗಾಯವಾಗಿ ಮೂಳೆಗಳು ಮುರಿದಿರುತ್ತವೆ ಮತ್ತು ಎರಡು ಕೈಗಳ ಮಣಿಗಂಟಿನ ಹತ್ತಿರ ಮೂಳೆ ಮುರಿತವಾಗಿ ಗಂಭೀರ ಸ್ವರೂಪದ ಗಾಯಗಳಾಗಿರುತ್ತವೆ. ಆ ಕಾರಣ ಬಿ.ಎನ್.ಎಸ್ ಕಲಂ 125(ಬಿ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಸದರಿ ಅಪಘಾತ ಪಡಿಸಿದ ನಂತರ ಸಾಕ್ಷಿ 2 ರವರಿಗೆ ಚಿಕಿತ್ಸೆಯನ್ನು ಕೊಡಿಸದೆ, ಹತ್ತಿರದ ಪೋಲೀಸ್ ಠಾಣೆಗೆ ಯಾವುದೇ ಮಾಹಿತಿಯನ್ನು ನೀಡದೆ ಕಾರನ್ನು ನಿಲ್ಲಿಸದೆ ಹೋಗಿರುವ ಕಾರಣ ಮೋಟಾರು ವಾಹನ ಕಾಯ್ದೆ 187 ಸಹವಾಚಕ 134(ಎ)(ಬಿ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಪ್ರಶ್ನೆ 1: ನಿಮಗೆ ಓದಿ ಹೇಳಲಾದ ಆರೋಪವನ್ನು ಅರ್ಥಮಾಡಿಕೊಂಡಿದ್ದೀರಾ?

ಉತ್ತರ : ಅರ್ಥವಾಯಿತು.

ಪ್ರಶ್ನೆ 2: ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಲೇಬೇಕೆ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

8.4.26.

ಸ್ಥಳ: ಪೊನ್ನಂಪೇಟೆ,
ದಿ:-08-04-2026

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಪೊನ್ನಂಪೇಟೆ.